| | | |
|---|---|---|
| 25. | Special Component Plan (Central)<br>2225-01-793-0-01 | 49.53 |
| 26. | Tribal Sub-Plan (Central)<br>2225-02-0794-0-02 | 21.14 |

---

**ಶಿರಸಿ ಆರ್.ಟಿ.ಓ. ಕಛೇರಿಯಲ್ಲಿ ಖಾಲಿ ಇರುವ ಹುದ್ದೆಗಳು**

210 - ಶ್ರೀ ವಿಶ್ವೇಶ್ವರ ಹೆಗಡೆ (ಅಂಕೋಲ) : ಮಾನ್ಯ ಸಾರಿಗೆ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಶಿರಸಿ ಆರ್.ಟಿ.ಓ. ಆಫೀಸಿನಲ್ಲಿ ಖಾಲಿ ಇರುವ ವಿವಿಧ ಹುದ್ದೆಗಳೆಷ್ಟು;*

*ಆ) ಇವುಗಳನ್ನು ಯಾವಾಗ ಭರ್ತಿ ಮಾಡಲಾಗುವುದು;*

*ಇ) ಶಿರಸಿಯಲ್ಲಿ ಆಫೀಸಿಗೆ ಸ್ವಂತ ಕಟ್ಟಡ ಯಾವಾಗ ಆಗುತ್ತದೆ?*

ಶ್ರೀ ಕೆ.ಎಸ್. ಬೀಳಗಿ (ಸಾರಿಗೆ ಸಚಿವರು) :

ಅ) ಶಿರಸಿ ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಖಾಲಿಯಿರುವ ಹುದ್ದೆಗಳ ವಿವರಗಳು ಕೆಳಕಂಡಂತಿವೆ.

| ಹುದ್ದೆಯ ಹೆಸರು | ಸಂಖ್ಯೆ |
|---|---|
| ಪ್ರಾದೇಶಿಕ ಸಾರಿಗೆ ಅಧಿಕಾರಿ | 1 |
| ಮೋಟಾರು ವಾಹನ ನಿರೀಕ್ಷಕರು | 1 |
| ಪ್ರಥಮ ದರ್ಜೆ ಸಹಾಯಕರು | 2 |
| ಬೆರಳಚ್ಚುಗಾರ | 1 |
| 'ಡಿ' ದರ್ಜೆ | 1 |
| | 6 |

ಆ) ಈಗಾಗಲೇ ಭರ್ತಿ ಮಾಡುವ ಕ್ರಮ ವಹಿಸಿದೆ. ಆಯ್ಕೆ ಪ್ರಾಧಿಕಾರಗಳಿಂದ ಅಭ್ಯರ್ಥಿಗಳ ಆಯ್ಕೆಪಟ್ಟಿ ಬಂದ ನಂತರ ನೇಮಕಾತಿ ಆದೇಶ ನೀಡುವ ಕ್ರಮ ವಹಿಸಲಾಗುವುದು.

ಇ) ಕಂದಾಯ ಇಲಾಖೆಯವರಿಂದ ಕಛೇರಿಗೆ ಸ್ವಂತ ನಿವೇಶನ ಮಂಜೂರಾತಿ ಆದೇಶ ದೊರಕಿದ ತಕ್ಷಣ ಕಟ್ಟಡ ಕಟ್ಟುವ ಬಗ್ಗೆ ಪ್ರಯತ್ನಿಸಲಾಗುವುದು.

ಅಧ್ಯಕ್ಷರು : ಲಿಖಿತ ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸಲಾಯಿತು.

ಮಾನ್ಯ ಜಯರಾಮ್ ಶೆಟ್ಟರೆ ತಾವು ನಿನ್ನೆದಿವಸ ಶೂನ್ಯ ವೇಳೆಯಲ್ಲಿ ಒಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಿರಿ. ಆದರೆ ನಿನ್ನ ಲೋಕೋಪಯೋಗಿ ಸಚಿವರು ಇರಲಿಲ್ಲ, ಇಂದು ಸಚಿವರು ಇದ್ದಾರೆ, ಆದ್ದರಿಂದ ತಾವು ತಮ್ಮ ವಿಚಾರವನ್ನು ಪ್ರಸ್ತಾಪ ಮಾಡಬಹುದು.

## ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

**ದಕ್ಷಿಣ ಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ ರಸ್ತೆಗಳ ದುರಸ್ತಿ**

+ ಶ್ರೀ ಕೆ. ಜಯರಾಮ್ ಶೆಟ್ಟಿ (ಉಳ್ಳಾಲ) : ಸನ್ಮಾನ್ಯ ಅಧ್ಯಕ್ಷರೆ, ಕಳೆದ ವಿಧಾನಸಭಾ ಅಧೀವೇಶದಲ್ಲಿ ದಕ್ಷಿಣಕನ್ನಡ ಜಿಲ್ಲೆಯ ಲೋಕೋಪಯೋಗಿ ಇಲಾಖೆಯ